

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಜಿಕೆವಿಕೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರೈತ ಸಂತೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ವಿವಿಧ ತಳಿಯ ಮಾವು, ಹಲಸಿನ ಹಣ್ಣು ಸೇರಿ ಸಾವಯವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದಿತು. ಕುಲಪತಿ ಡಾ. ಎಸ್.ವಿ. ಸುರೇಶ್ ಇತರರಿದ್ದರು.

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ
Bengaluru Edition
May 25, 2025 Page No. 9

25-05-2025
Hosadiganta pg 10

ಬೆಳಗ್ಗೆಯಿಂದಲೇ ತರಕಾರಿ ಖರೀದಿಸಿದ ಜನತೆ | ಗಮನ ಸೆಳೆದ ಔಷಧ ಸಸ್ಯಗಳು

ರೈತ ಸಂತೆಗೆ ಉತ್ತಮ ಸ್ಪಂದನೆ



• **ಬೆಂಗಳೂರು:** ಹೆಬ್ಬಾಳದ ಜಿಕೆವಿಕೆ ಆವರಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ರೈತ ಸಂತೆಗೆ ಉತ್ತಮ ಸ್ಪಂದನೆ ಮೂರಕಿದ್ದು, ಬೆಳಗ್ಗೆ 7 ಗಂಟೆಯಿಂದಲೇ ಜನರು ಆಗಮಿಸಿ ಖರೀದಿಗಾಗಿ ಮುಗಿಬಿದ್ದಿದ್ದರು.

ಬೆಂಗಳೂರು ಕೃಷಿ ವಿವಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರೈತ ಸಂತೆಯಲ್ಲಿ ವಿವಿಧ ಬಗೆಯ ಹಲಸು ಹಾಗೂ ಮಾವಿನ ಹಣ್ಣುಗಳು ಗ್ರಾಹಕರ ಗಮನ ಸೆಳೆದವು. ಮತ್ತೊಂದೆಡೆ ಪಶುಸಂಗೋಪನೆ, ಕೇಕ್ ಪ್ರದರ್ಶನ, ವಿವಿಧ ಬಗೆಯ ಅಕ್ಕಿ, ರಾಸಾಯನಿಕ ಮುಕ್ತ ಬೆಲ್ಲ ಹಾಗೂ ನಾನಾ ಬಗೆಯ ತರಕಾರಿಗಳು ಹಾಗೂ ತಿಂಡಿ ತಿನಿಸ್ಸನ್ನು ಜನರು ಖುಷಿಯಿಂದ ಖರೀದಿಸಿದರು.

ಬೆಳಗ್ಗೆ 7 ಗಂಟೆಗೆ ಸಂತೆ ಆರಂಭವಾದ್ದರಿಂದ ವಾಯುವಿಹಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಯಲ್ಲಿ ತೊಡಗಿದ್ದರು. ರೈತ ಸಂಘಗಳು ತಯಾರಿಸಿದ ಉತ್ಪನ್ನಗಳು, ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕಗೊಬ್ಬರಗಳು, ಕೃಷಿಯಂತ್ರೋಪಕರಣ, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ, ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಗವ್ಯೋತ್ಪನ್ನಗಳು, ಅಡಕೆ ಉತ್ಪನ್ನಗಳು, ಜೇನು ಕೃಷಿ, ವಾಣಿಜ್ಯಕರಣ ಉತ್ಪನ್ನಗಳು ನಗರದ ಜನರನ್ನು ಸೆಳೆದವು.

> ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರ ಮಾರುಕಟ್ಟೆಯಿಂದ ಕೃಷಿಕರಿಗೆ ಹೆಚ್ಚಿನ ಆದಾಯ ಕಲ್ಪಿಸುವಲ್ಲಿ ರೈತ ಸಂತೆ ಸಹಕಾರಿಯಾಗಲಿದೆ. ರೈತ ಸಂತೆಯ ಮೂಲಕ ರೈತರು ತಾವು ಬೆಳೆದ ಉತ್ಪನ್ನಗಳನ್ನು ನೇರ ಮಾರಾಟಮಾಡಲು ಮುಂದಾದಾಗ ಆರ್ಥಿಕವಾಗಿ ಸದೃಢರಾಗಬಹುದು.
> ■ ಡಾ.ಎಸ್.ವಿ.ಸುರೇಶ, ಕೃಷಿ ವಿಶ್ವವಿದ್ಯಾಲಯದ ಕುಲಪತಿ

ರೈತಸಂತೆಯಲ್ಲಿ ಭರಪೂರ ಮಾರಾಟ

ಜಿಕೆವಿಕೆ ಆವರಣದಲ್ಲಿ ಜಾನುವಾರುಗಳ ಪ್ರದರ್ಶನ | ಸಸಿಗಳ ಮಾರಾಟ ಜೋರು

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿವಿ ವತಿಯಿಂದ ಜಿಕೆವಿಕೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ರೈತ ಸಂತೆ'ಯಲ್ಲಿ ಬಗೆ ಬಗೆಯ ತರಕಾರಿಗಳು, ಮಾವು, ಹಲಸಿನ ಹಣ್ಣುಗಳು ಸೇರಿದಂತೆ ತೋಟಗಾರಿಕೆ ಉತ್ಪನ್ನಗಳ ಮಾರಾಟ ಜೋರಾಗಿ ನಡೆಯಿತು.

ಸಂತೆ ಪ್ರಯುಕ್ತ ಜಾನುವಾರುಗಳ ಪ್ರದರ್ಶನ, ಸೆಲ್ಫಿ ಪಾಯಿಂಟ್ ವಿಶೇಷ ಆಕರ್ಷಣೆಯಾಗಿತ್ತು. ಸಸಿಗಳ ಮಾರಾಟಕ್ಕೂ ವ್ಯವಸ್ಥೆ ಮಾಡಲಾಗಿತ್ತು.

ರೈತ ಸಂತೆಗೆ ಚಾಲನೆ ನೀಡಿ ಮಾತನಾಡಿದ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ, ''ಮಧ್ಯವರ್ತಿಗಳ ಹಾವಳಿ ಇಲ್ಲದೆ ರೈತರ ಉತ್ಪನ್ನಗಳಿಗೆ ನೇರ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ, ಹೆಚ್ಚಿನ ಆದಾಯ ಕಲ್ಪಿಸುವಲ್ಲಿ ಸಂತೆಗಳು ಸಹಕಾರಿಯಾಗಿವೆ. ರೈತರು ಆರ್ಥಿಕವಾಗಿ ಸದೃಢರಾಗಬೇಕಾದರೆ, ನೇರವಾಗಿ ತಾವೇ ಬೆಳೆದ ಫಸಲನ್ನು ಮಾರಾಟ ಮಾಡಬೇಕು. ಮುಂದಿನ ದಿನಗಳಲ್ಲಿ ರೈತರ ನೇರ ಮಾರುಕಟ್ಟೆಗೆ ಉತ್ತಮ ಅತ್ಯಗತ್ಯವಾಗಿದೆ. ಇದರಿಂದಾಗಿ ಉತ್ತಮ ಲಾಭಾಂಶದ ಅವಕಾಶಗಳಿವೆ. ವಾರದ ಸಂತೆಗಳನ್ನು ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಮತ್ತೆ ಜಾರಿಗೆ ತರುವುದು ಜತೆಗೆ ಗ್ರಾಹಕರಿಗೆ ತಾಜಾ ಉತ್ಪನ್ನಗಳನ್ನು ಒದಗಿಸಬಹುದಾಗಿದೆ,'' ಎಂದು ತಿಳಿಸಿದರು.



ಈ ಬಾರಿ ಕೃಷಿ ಸಂತೆಯಲ್ಲಿ ಮಾವು ಹಾಗೂ ಹಲಸಿನ ಹಣ್ಣುಗಳಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಗುಣಮಟ್ಟದ ಹಾಗೂ ತಾಜಾ ಉತ್ಪನ್ನಗಳನ್ನು ಕಡಿಮೆ ದರದಲ್ಲಿ ನೇರವಾಗಿ ಗ್ರಾಹಕರಿಗೆ ತಲುಪಿಸಲು ಸಂತೆ ಸಹಕಾರಿಯಾಗಿದೆ. ಸಾರ್ವಜನಿಕರು ಹಾಗೂ ರೈತ ಬಾಂಧವರು ಈ ಸಂತೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಸಂತೆಯಲ್ಲಿ ನಾನಾ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ವಿದ್ಯಾಲಯಗಳಲ್ಲಿ ಬೆಳೆದ ಕೃಷಿ ಉತ್ಪನ್ನಗಳು, ಕೃಷಿ ತಂತ್ರಜ್ಞಾನ/ತಾಂತ್ರಿಕತೆಗಳು, ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ನಾನಾ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಹಣ್ಣುಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಕೆ ಉತ್ಪನ್ನಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಅಣಬೆ ಮತ್ತು ಜೇನುಕೃಷಿ, ವಾಣಿಜ್ಯೀಕರಣ ಉತ್ಪನ್ನಗಳು, ಪಶುಸಂಗೋಪನೆ, ಕೇಕ್ ಪ್ರದರ್ಶನ, ರಾಜಮುಡಿ ಅಕ್ಕಿ, ರಾಸಾಯನಿಕಮುಕ್ತ ಬೆಲ್ಲ ಮತ್ತು ಕೃಷಿ ಪ್ರಕಟಣೆಗಳ ಮಾರುಕಟ್ಟೆಗೆ ಅವಕಾಶ ಕಲ್ಪಿಸಲಾಗಿತ್ತು.

ಕೃಷಿ ವಿವಿಯ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಅಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

25-05-2025
V-karnataka
pg 14

ವಿ ರೈತ ಮಿತ್ರ

ಹಲಸಿನ ಹಣ್ಣು ಕೊಳೆಯುತ್ತಿದ್ದು, ಇದರ ನಿರ್ವಹಣೆ ಹೇಗೆ?



| ಅನ್ವಿತಾ ತೂಬುಗೆರೆ

ಹಲಸು ಹಣ್ಣಾದಾಗ ಕೊಳೆ ರೋಗವು ಅತ್ಯಂತ ಗಂಭೀರವಾದದ್ದು. ರೋಗ ಹರಡುವ ಶಿಲೀಂಧ್ರದಿಂದ ಕಾಯಿ ಮತ್ತು ಹಣ್ಣುಗಳ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಂಡುಬರುತ್ತವೆ. ರೋಗದ ತೀವ್ರತೆ ಹೆಚ್ಚಿದ್ದಲ್ಲಿ ಹಣ್ಣಿನ ತಿರುಳು ಕೊಳೆಯುತ್ತದೆ.

ನಿರ್ವಹಣೆ: ಮರಗಳಿಗೆ ಉತ್ತಮ ಗಾಳಿ-ಬೆಳಕು ಒದಗಿಸುವುದು. ರೋಗ ಪೀಡಿತ ಹಣ್ಣುಗಳನ್ನು ತೆಗೆದು ನಾಶಪಡಿಸುವುದು. ಮರದ ಸುತ್ತ-ಮುತ್ತ ಕೊಳೆಯುತ್ತಿರುವ ಸಾವಯವ ಅವಶೇಷಗಳನ್ನು ತೆಗೆದು ಸ್ವಚ್ಛಗೊಳಿಸುವುದು. ಮರದ ಬೇರಿನ ವಲಯಗಳಲ್ಲಿ ನೀರು ನಿಲ್ಲುವುದನ್ನು ತಡೆಗಟ್ಟುವುದು. ಹಣ್ಣಾದ ಹಣ್ಣುಗಳನ್ನು ಗಾಯಗೊಳಿಸಬಾರದು ಹಾಗೂ ಮಣ್ಣಿನ ಸಂಪರ್ಕದಿಂದ ದೂರವಿಡಬೇಕು. ಅವಶ್ಯವಿದ್ದಲ್ಲಿ ಕೇ.1.0ರ ಬೋರ್ಡೊ ದ್ರಾವಣ ಅಥವಾ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯುಸಿ 3.0 ಗ್ರಾಂ ನಂತೆ ಬೆರೆಸಿ ಸಿಂಪಡಿಸುವುದು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

25-05-2025
Udayavani
pg 11

Vijayavani
pg 11

ಕಪ್ಪತಗುಡ್ಡ ಪರಿಸರದಲ್ಲಿ ಕಾಮನಬಿಲ್ಲು ಜೇಡ ಪತ್ತೆ

ಲಕ್ಷ್ಮೇಶ್ವರ: ಸಾಲ್ಟಿಸಿಡೇ' ಕುಟುಂಬಕ್ಕೆ ಸೇರಿದ ಸ್ಪೆನಾಲೂರಿಲಸ್ ಲೆಸರ್ಟಿ' ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲ್ಪಡುವ ಜೇಡಗಳ ಪ್ರಭೇದ ಕಪ್ಪತಗುಡ್ಡ ಬೆಟ್ಟಗಳ ಶ್ರೇಣಿಗೆ ಹೊಂದಿಕೊಂಡಿರುವ ಗದಗ ಜಿಲ್ಲೆಯ ಮಾಗಡಿ, ಶಟ್ಟಿಕೆರೆ ಅರಣ್ಯ ವ್ಯಾಪ್ತಿಯಲ್ಲಿ ಪತ್ತೆಯಾಗಿದೆ. ಈ ಪ್ರಭೇದದ ಜೇಡವು ದಕ್ಷಿಣ ಭಾರತ ಮತ್ತು ಶ್ರೀಲಂಕಾದಲ್ಲಿ ಕಂಡು ಬರುತ್ತದೆ. ಜೀವವೈವಿಧ್ಯ ಸಂಶೋಧಕ ಮಂಜುನಾಥ ನಾಯಕ, ಸಂಗಮೇಶ ಕಡಗದ, ಶರಣು ಗೌಡರ, ಬೆಂಗಳೂರಿನ ಎಸ್. ಸುನೀಲ್ ಕುಮಾರ್ ಈ ಜೇಡದ ಇರುವಿಕೆಯನ್ನು ಮಾಗಡಿ ವ್ಯಾಪ್ತಿಯಲ್ಲಿ ಗುರುತಿಸಿದ್ದಾರೆ. ಇದರ ಮೈ ಬಣ್ಣವು ಆಕರ್ಷಕವಾಗಿದ್ದು, ಗಂಡು ಜೇಡಗಳ ಮುಖದ ಮುಂಭಾಗದಲ್ಲಿ ಕೆಂಪು ಮತ್ತು ನೀಲಿ ಸಮತಲ ಪಟ್ಟಿಗಳು ಮತ್ತು ಕಾಮನಬಿಲ್ಲಿನ ವರ್ಣ ಸಂಯೋಜನೆಯಂತಿರುವುದರಿಂದ (ರೇನ್‌ಬೋ ಸ್ಪೈಡರ್) ಕಾಮನ ಬಿಲ್ಲಿನ ಜೇಡ ಎನ್ನುತ್ತಾರೆ. ಇವಕ್ಕೆ ನಗೆ ಜೇಡ ಎಂಬ ಹೆಸರೂ ಇದೆ. 5 ರಿಂದ 6 ಮಿ.ಮೀ ಗಾತ್ರ ಹೊಂದಿರುತ್ತವೆ. ಹೆಣ್ಣು ಜೇಡ ಗಂಡು ಜೇಡಕ್ಕಿಂತ ಸ್ವಲ್ಪ ದೊಡ್ಡದಿರುತ್ತದೆ.



ಕಾಮನಬಿಲ್ಲಿನ ಜೇಡ.

ಸಮಗ್ರ ಸಸ್ಯ ಪೋಷಕಾಂಶ ನಿರ್ವಹಣೆ ಕುರಿತು ತರಬೇತಿ | ಮಣ್ಣು, ಗೊಬ್ಬರ ಬಳಕೆ ಕುರಿತು ಅರಿವು

ಕೃಷಿಕರು ಬೆಳೆಯಲ್ಲಿ ಪೋಷಕಾಂಶದ ಕೊರತೆ ನೀಗಿಸಲಿ

ದೊಡ್ಡಬಳ್ಳಾಪುರ: ಸಮಗ್ರ ಪೋಷಕಾಂಶ ನಿರ್ವಹಣೆಯಲ್ಲಿ 15 ದಿನದ ತರಬೇತಿ ಕಾರ್ಯಕ್ರಮವನ್ನು ತಾಲೂಕಿನ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಆಯೋಜಕರಾದ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ.ಪಿ.ವೀರನಾಗಪ್ಪ ಮಾತನಾಡಿ, ಎಲ್ಲಾ ಶಿಬಿರಾರ್ಥಿಗಳಿಗೆ ಕರ್ನಾಟಕದ ಕೃಷಿ ಪರಿಚಯ, ಮಣ್ಣಿನ ಉತ್ಪತ್ತಿ, ಮಣ್ಣಿನ ಪಾರ್ಶ್ವ ದೃಶ್ಯ, ಪದರ, ಮಣ್ಣಿನ ಜೈವಿಕ, ಭೌತಿಕ ಹಾಗೂ ರಾಸಾಯನಿಕ ಗುಣಗಳು ಕರ್ನಾಟಕದ ವಿವಿಧ ರೀತಿಯ ಮಣ್ಣು, ಕೃಷಿ ಬೆಳೆಗಳಲ್ಲಿ ಪೋಷಕಾಂಶಗಳ ಪಾತ್ರ ಪೋಷಕಾಂಶವನ್ನು ಪೂರೈಕೆ ಮಾಡಲು ಬೇಕಾಗುವ ಎಲ್ಲಾ ರೀತಿಯ ಸಾವಯವ ಗೊಬ್ಬರ.

ರಾಸಾಯನಿಕ ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರದ ಲೆಕ್ಕಾಚಾರ ಮತ್ತು ಸಿದ್ಧಗಣಿತ ಇವುಗಳ ಜೊತೆಗೆ ಮಣ್ಣಿನ ಫಲವತ್ತತೆ, ಮಣ್ಣಿನ ಆರೋಗ್ಯ ಮತ್ತು ರಸಗೊಬ್ಬರ ನಿರ್ವಹಣೆಯ ವಿಷಯ ಕುರಿತು ಹಲವಾರು ತಜ್ಞರು ಶಿಬಿರಾರ್ಥಿಗಳಿಗೆ ಮಾಹಿತಿ ನೀಡಿದರು. ಶಿಬಿರಾರ್ಥಿಗಳಿಗೆ ವಿವಿಧ ರೀತಿಯ ಗೊಬ್ಬರ, ರಾಸಾಯನಿಕ ಗೊಬ್ಬರ, ನ್ಯಾನೋ ಗೊಬ್ಬರ, ರಾಸಾಯನಿಕ ಗೊಬ್ಬರದಲ್ಲಿ ಕಲಬೆರಕೆ ಕಂಡುಹಿಡಿಯುವ



26-05-2025
Hosadiganta Pg 10

ವಿಧಾನಗಳು, ಹನಿ ರಸಾವರಿ ತಾಂತ್ರಿಕತೆ, ಸಮಗ್ರ ಪೋಷಕಾಂಶ ನಿರ್ವಹಣೆ ಸಂಯೋಜನೆ ಕೌಶಲ ಮತ್ತು ಸಾಮಾಜಿಕ ಮಾಧ್ಯಮಗಳ ಕುರಿತು ಸುದೀರ್ಘ ಉಪನ್ಯಾಸ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಪೋಷಕಾಂಶ ನಿರ್ವಹಣೆಯ ಮಹತ್ವ: ಸಸ್ಯಗಳಿಗೆ ಒಟ್ಟು 17 ಪೋಷಕಾಂಶಗಳ ಅಗತ್ಯತೆ ಇದೆ. ಇವು ಮಣ್ಣು, ನೀರು, ಗಾಳಿ, ಗೊಬ್ಬರ ಹಾಗೂ ರಸಗೊಬ್ಬರದ ಮೂಲಕ ಬೆಳೆಗೆ ಪೂರೈಕೆಯಾಗುತ್ತವೆ. ಇವುಗಳ ವಿವಿಧ ಮೂಲವಾದ ಹಸಿರೆಲೆ ಗೊಬ್ಬರ, ಸಾವಯವ ಗೊಬ್ಬರ, ರಸ ಗೊಬ್ಬರ, ಜೈವಿಕ ಗೊಬ್ಬರಗಳು, ಪರ್ಯಾಯ ಗೊಬ್ಬರದ ಮೂಲಗಳು, ಬೆಳೆ ಉಳಿಕೆಗಳು, ಕಾರ್ಖಾನೆ ತ್ಯಾಜ್ಯಗಳು, ಬೆಳೆ ಪರಿವರ್ತನೆ, ವಿವಿಧ ರೀತಿಯ ಮಣ್ಣು ಸುಧಾರಕಗಳ ಬಳಕೆ, ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಮೂಲಕ ಸುಸ್ಥಿರ ಮಣ್ಣಿನ ನಿರ್ವಹಣೆಗೆ ಅನುಕೂಲವಾಗುವುದು ಎಂದು ವಿವರಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಬಿ.ಜಿ. ಹನುಮಂತರಾಯ ಮಾತನಾಡಿ ಈ ಕಾರ್ಯಕ್ರಮಕ್ಕೆ ಭಾಗವಹಿಸಲು ಇಚ್ಛಿಸುವ ಶಿಬಿರಾರ್ಥಿಗಳು 12,500 ವಂತಿಕೆಯನ್ನು ಡಿಡಿ ಮೂಲಕ ಸಂಬಂಧಪಟ್ಟ ಜಿಲ್ಲೆಯ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ ಮುಖಾಂತರ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಈ 15 ದಿನಗಳ ಸರ್ಟಿಫಿಕೇಟ್ ಕೋರ್ಸ್‌ಗಳ ಸೇರ್ಪಡೆಯಾಗಲು ಅವಕಾಶವಿರುತ್ತದೆ. ರಸಗೊಬ್ಬರ ಹಾಗು ಇತರೆ ಗೊಬ್ಬರವನ್ನು ಮಾರಾಟ ಮಾಡಲು ಈ ಕೋರ್ಸ್ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಶಿಬಿರಾರ್ಥಿ ಕೃಷ್ಣಮೂರ್ತಿ ಮಾತನಾಡಿ, 15 ದಿನಗಳ ತರಬೇತಿ ವೈಜ್ಞಾನಿಕವಾಗಿದೆ. ಇದರಿಂದ ಹಲವು ಮಣ್ಣು ಮತ್ತು ಗೊಬ್ಬರಗಳ ನಿರ್ವಹಣೆಯ ಜೊತೆ ಕ್ಷೇತ್ರ ಸಮಸ್ಯೆಯನ್ನು ತಿಳಿದುಕೊಂಡಿರುವುದಾಗಿ ಪ್ರತಿಕ್ರಿಯಿಸಿ ಇಲ್ಲಿ ಕಲಿತ ಗೊಬ್ಬರ ನಿರ್ವಹಣೆ ವಿಷಯಗಳು ರೈತರಿಗೆ ಅನುಕೂಲವಾಗುತ್ತವೆ. ಇದನ್ನು ನಾನು ವ್ಯವಸಾಯದಲ್ಲಿ ಅಳವಡಿಸಿಕೊಂಡು ಇತರರಿಗೂ ಕೂಡ ಹಂಚಿಕೆ ಮಾಡುತ್ತೇನೆ ಎಂದರು.

ಲಾಲ್‌ಬಾಗ್: ಮೂರು ದಿನಗಳ 'ಸಾವಯವ ಮಾವು– ಹಲಸು ಮೇಳ' ಸಂಪನ್ನ

ಗಮನ ಸೆಳೆದ ಬೀಜ ರಹಿತ ಹಲಸಿನ ತಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಜಿನ ತುಂಬಾ ಹತ್ತಾರು ತಳಿಗಳ ಹಲಸಿನ ಹಣ್ಣುಗಳನ್ನು ಸಾಲಾಗಿ ಜೋಡಿಸಲಾಗಿತ್ತು. ಇವುಗಳ ನಡುವೆ ಅರ್ಧ ಕೊಯ್ದು ಇಟ್ಟಿದ್ದ ಬೀಜ ರಹಿತ ಹಲಸಿನ ಹಣ್ಣಿನ ಮೇಲೆಯೇ ಎಲ್ಲರ ಕಣ್ಣು ನೆಟ್ಟಿದ್ದವು...

ಲಾಲ್‌ಬಾಗ್‌ನಲ್ಲಿ ಭಾನುವಾರ ಸಂಪನ್ನಗೊಂಡ ಮೂರು ದಿನಗಳ ಸಾವಯವ ಮಾವು- ಹಲಸು ಮೇಳದಲ್ಲಿಟ್ಟಿದ್ದ ತರಹೇವಾರಿ ಹಲಸಿನ ತಳಿಗಳ ಹಣ್ಣುಗಳ ನಡುವೆ ಹೆಚ್ಚು ಜನರ ಕಣ್ಣೆಳೆದಿದ್ದು ಈ ಬೀಜ ರಹಿತ ಹಲಸಿನ ಹಣ್ಣು. ಜೈವಿಕ್ ಕೃಷಿಕ್ ಸೊಸೈಟಿ ಮತ್ತು ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಈ ಮೇಳವನ್ನು ಆಯೋಜಿಸಲಾಗಿತ್ತು.

ಬಣ್ಣ ಬಣ್ಣದ, ಅಂಟಿಲ್ಲದ ಹಲಸಿನ ನಡುವೆ, ಬೀಜರಹಿತ ಹಲಸು ಜನರಿಗೆ ಅಚ್ಚರಿ ಮೂಡಿಸಿತು. 'ಈ ಹಲಸಿನಲ್ಲಿ ಅಂಟು ತುಸು ಕಡಿಮೆ. ರುಚಿಯೂ ಬಲು ಸೊಗಸು' ಎಂದರು ಮೇಳದ ಆಯೋಜಕರಲ್ಲಿ ಒಬ್ಬರಾದ ಜೈವಿಕ್ ಕೃಷಿ ಸೊಸೈಟಿಯ ಕೆ. ರಾಮಕೃಷ್ಣಪ್ಪ. ಬೀರೂರಿನ ಅನ್ನಪೂರ್ಣ ನರ್ಸರಿಯವರು ಬೀಜರಹಿತ ಹಲಸಿನ ಹಣ್ಣನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ದೇವನಹಳ್ಳಿಯ ತೇಜ ನರ್ಸರಿಯವರೂ ಈ ಹಲಸಿನ ತಳಿಗಳ ಗಿಡಗಳನ್ನು



ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಮೇಳದಲ್ಲಿ ಹಲಸು – ಮಾವಿನ ತಳಿಗಳ ವೈವಿಧ್ಯದ ಪ್ರದರ್ಶನ

ಮಾರಾಟಕ್ಕಿಟ್ಟಿದ್ದರು.

'ಇದು ಥಾಯ್ಲೆಂಡ್‌ನ ತಳಿ. ಐದಾರು ವರ್ಷಗಳ ಹಿಂದೆ ಇಲ್ಲಿ ಪರಿಚಯವಾಯಿತು. ಇತ್ತೀಚೆಗೆ ಹೆಚ್ಚು ಚರ್ಚೆಯಲ್ಲಿದೆ. ಈ ಗಿಡದ ಬೆಳವಣಿಗೆ ಚೆನ್ನಾಗಿದೆ. ಆದರೆ ಕಾಯಿ ಬಿಡುವುದು ಸ್ವಲ್ಪ ನಿಧಾನ. ಕೆಲವರು ತೋಟಗಳಲ್ಲಿ ಒಂದೋ ಎರಡೋ ಗಿಡಗಳನ್ನು ಹಾಕಿಕೊಳ್ಳುತ್ತಿದ್ದಾರೆ' ಎಂದು ತೇಜ ನರ್ಸರಿಯ ಶಿವನಾಪುರ ರಮೇಶ್ ವಿವರಿಸಿದರು.

ಹಲಸಿನ ವೈವಿಧ್ಯ



ಬೀಜರಹಿತ ಹಲಸಿನ ಹಣ್ಣು

ಪ್ರದರ್ಶನಕ್ಕಿಟ್ಟಿದ್ದ ಲಾಲ್‌ಬಾಗ್ ಮಧುರ, ಬೈರಸಂದ್ರ, ಸಿದ್ದು, ಶಂಕರ ಸೇರಿದಂತೆ 60 ಹಲಸಿನ ತಳಿಗಳು, 85ಕ್ಕೂ ಅಧಿಕ ಮಾವಿನ ತಳಿಗಳ ಹಣ್ಣುಗಳಿದ್ದವು. 15 ವಿವಿಧ ತಳಿಗಳ ಅಪ್ಪೆ ಮಿಡಿ ನೋಡುಗರ ಗಮನಸೆಳೆದವು.

ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಕೆಂಪು ಹಲಸಿನ ಹಣ್ಣಿಗೆ ಬೇಡಿಕೆ ಹೆಚ್ಚಾಗಿತ್ತು. ಎರಡನೇ ದಿನಕ್ಕೆ ಎಲ್ಲ ಖಾಲಿಯಾಯಿತು. ಮೇಳದಲ್ಲಿ ಸುಮಾರು 15 ಟನ್ ಹಲಸು ಮತ್ತು ಸುಮಾರು 13 ಟನ್ ಮಾವಿನ ಹಣ್ಣುಗಳು ಮಾರಾಟವಾದವು. ಹಲಸಿನ ಐಸ್ ಕ್ರೀಂ, ಮಿಲ್ಕ್ ಶೇಕ್, ಹಪ್ಪಳ, ಚಿಪ್ಸ್ ರುಚಿಗೆ ಗ್ರಾಹಕರು ಮನಸೋತರು.

ಮಂಡ್ಯ ಜಿಲ್ಲೆಯ ಕಿರುವಾಗಿಲಿನ ಟಪ್ಪು ಸುಲ್ತಾನ್ ಬಡಾ ಬಾಗ್ ತೋಟದ ಐತಿಹಾಸಿಕ ಮಾವಿನ ತಳಿಗಳು, ದುಬಾರಿ ಬೆಲೆಯ ಮಿಯಾಜಾಕಿ ಮಾವು ಮೇಳದ ಮತ್ತೊಂದು ಆಕರ್ಷಣೆ. ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ಹೊಸ ಮಾವಿನ ತಳಿಗಳು ಸಾರ್ವಜನಿಕರ ಗಮನ ಸೆಳೆದವು. ಬೆಳವಲ ತೋಟದ ಸೋಲೊ ಪಪ್ಪಾಯ, ಸ್ಟಾರ್ ಫ್ರೂಟ್ ಮತ್ತು ಜೀರಿಗೆ ಮಾವಿನ ರುಚಿ ಸವಿದು ಜನರು ಖುಷಿ ಪಟ್ಟರು.

26-05-2025
Prajavani Pg 11

ಮಾರುಕಟ್ಟೆಯಲ್ಲಿ ಬಾದಾಮಿಗೆ ತಗ್ಗಿದ ಬೇಡಿಕೆ • ಸೇಂದೂರ, ತೋತಾಪುರಿ ಕೇಳುವವರಿಲ್ಲ

ಬೆಳೆಗಾರರ ಪಾಲಿಗೆ ಕಹಿಯಾದ ಮಾವು

• ಆರ್. ಜಿತೇಂದ್ರ

ಮೈಸೂರು: ರಾಜ್ಯದಾದ್ಯಂತ ಮಾವಿನ ಸಗಟು ಧಾರಣೆಯು ತೀವ್ರವಾಗಿ ಕುಸಿತ ಕಂಡಿದ್ದು, ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ.

ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ಮಾವಿನ ಫಸಲು ವಿಳಂಬವಾಗಿದ್ದು, ರಾಜ್ಯದಾದ್ಯಂತ ಏಕಕಾಲಕ್ಕೆ ಉತ್ತನ್ನ ಮಾರುಕಟ್ಟೆಗೆ ಬಂದಿರುವುದೇ ಬೆಲೆ ಕುಸಿತಕ್ಕೆ ಪ್ರಮುಖ ಕಾರಣ. ಈ ಹಂಗಾಮಿನಲ್ಲಿ ಶೇ 30-40ರಷ್ಟು ಫಸಲಷ್ಟೇ ಇದ್ದರೂ ಬೆಲೆ ಕುಸಿಯುತ್ತಲೇ ಇದೆ.

ರಾಮನಗರ ಹಾಗೂ ಮೈಸೂರು ಭಾಗದಲ್ಲಿ ಏಕಕಾಲಕ್ಕೆ ಕೊಯ್ಲು ನಡೆಯುತ್ತಿದೆ. ಕೋಲಾರ-ಚಿಕ್ಕಬಳ್ಳಾಪುರದಲ್ಲಿಯೂ ಮಾವು ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಹೀಗಾಗಿ ಅಲ್ಲಿನ ಉತ್ತನ್ನ ಅಲ್ಲಿನ ಮಾರುಕಟ್ಟೆಗೆ ಸೀಮಿತಗೊಂಡಿದ್ದು, ರಫ್ತು ಸಹ ಈ ಬಾರಿ ಆಶಾದಾಯಕವಾಗಿಲ್ಲ ಎನ್ನುತ್ತಾರೆ ಬೆಳೆಗಾರರು.

'ರಾಜ್ಯದಲ್ಲಿ ಅತಿ ಹೆಚ್ಚು ಬೆಳೆಯುವ, ತನ್ನ ಸ್ವಾದದಿಂದ ಹೆಸರಾದ 'ಬಾದಾಮಿ' ಮಾವಿನ ಹಣ್ಣು ಈ ಬಾರಿ ಬೆಳೆಗಾರರಿಗೆ



ಮೈಸೂರಿನ ಕುಪ್ಪಣ್ಣ ಉದ್ಯಾನದಲ್ಲಿ ನಡೆದಿರುವ ಮಾವು ಮೇಳದಲ್ಲಿ ಮಾರಾಟಕ್ಕಿಟ್ಟಿರುವ ಮಾವಿನ ಹಣ್ಣು

ಪ್ರಜಾವಾಣಿ ಚಿತ್ರ

ಕಹಿಯಾಗುತ್ತಿದೆ. ಈ ವರ್ಷ ಈ ತಳಿಯ ಹಣ್ಣಿಗೆ ಬೇಡಿಕೆ ಕುಸಿದಿದ್ದು, ಕಾಯಿಯ ಬೆಲೆ ₹100ಕ್ಕಿಂತ ಏರಿಕೆಯಾಗಿಲ್ಲ. ಕಾಯಿಯ ಫ್ಯಾಕ್ಟರಿ ದರ ಬುಧವಾರ ಟನ್‌ಗೆ ₹32 ಸಾವಿರ ಇದ್ದದ್ದು (ಪ್ರತಿ ಕೆ.ಜಿ.ಗೆ ₹32) ಗುರುವಾರ-ಶುಕ್ರವಾರದಂದು ₹28 ಸಾವಿರಕ್ಕೆ ಕುಸಿದಿದೆ. ಒಂದೇ ದಿನದಲ್ಲಿ ಟನ್‌ಗೆ ₹4 ಸಾವಿರ ಇಳಿಕೆ ಆಗಿದೆ' ಎಂದು ರಾಮನಗರ ಜಿಲ್ಲೆಯ ರಾಜ್ಯದಲ್ಲಿ ರಸಪೂರಿ ಮಾವು ಬೆಳೆಯುವ ಪ್ರದೇಶ ಕಡಿಮೆ ಆಗುತ್ತಿದೆ. ಹಾಗಾಗಿ, ಈ ತಳಿಯ ಹಣ್ಣಿನ ಬೆಲೆ ಹೆಚ್ಚಳವಾಗುತ್ತಿದೆ

ಶಶಾಂಕ್ ಮಾವು ಬೆಳೆಗಾರ, ಮೈಸೂರು

ಅರೇಹಳ್ಳಿಯ ಮಾವು ಬೆಳೆಗಾರ ಜೋಗಿ ಶಿವರಾಮು ತಿಳಿಸಿದರು.

ರಸಪೂರಿಗೆ ಬಂಪರ್ ಬೆಲೆ



ಈ ಬಾರಿ ರಸಪೂರಿ ಮಾವಿನ ದರವು 'ಬಾದಾಮಿ'ಯನ್ನೂ ಹಿಂದಿಕ್ಕಿದ್ದು, ಬೆಲೆ ಕುಸಿತದ ನಡುವೆಯೂ ಬೆಳೆಗಾರರಿಗೆ ಬಂಪರ್ ಕೊಡುಗೆ ನೀಡುತ್ತಿದೆ. ಕೊಯ್ಲಿನ ಆರಂಭದಲ್ಲಿ ಸಗಟು ದರ ಪ್ರತಿ ಕೆ.ಜಿ.ಗೆ ₹180ರಿಂದ ₹200ಕ್ಕೆ ತಲುಪಿತ್ತು. ಈಗಲೂ ಕಾಯಿಗೆ ಸರಾಸರಿ ₹80ರಿಂದ ₹90 ಬೆಲೆ ಇದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಹಣ್ಣಿನ ದರ ₹120ರ ಸಮೀಪದಲ್ಲಿದೆ.

'ಸಣ್ಣ ತೊಗಟೆ, ಹೆಚ್ಚು ರುಚಿ ಹಾಗೂ ಹಣ್ಣಿನ ಪ್ರಮಾಣ ಹೆಚ್ಚು ಎನ್ನುವ ಕಾರಣಕ್ಕೆ ರಸಪೂರಿ ಜನರಿಗೆ ಇಷ್ಟವಾಗುತ್ತಿದೆ. ಅದರಲ್ಲೂ ಬೆಂಗಳೂರು-ಮೈಸೂರು ಭಾಗದಲ್ಲಿ ಹೆಚ್ಚು ಬೇಡಿಕೆ ಇದೆ' ಎನ್ನುತ್ತಾರೆ ಮೈಸೂರಿನ ಮಾವು ಬೆಳೆಗಾರ ಶಶಾಂಕ್.

ಸೇಂದೂರ, ತೋತಾಪುರಿ, ಸಿರಿ ಮೊದಲಾದ ತಳಿಯ ಮಾವಿನ ಹಣ್ಣನ್ನು ಈ ಬಾರಿ ಕೇಳುವವರೂ ಇಲ್ಲ. 'ನೀಲಂ' ಇನ್ನಷ್ಟೇ ಮಾರುಕಟ್ಟೆಗೆ ಬರಬೇಕಿದೆ.

ವರ್ತಕರಿಗೆ ಲಾಭ: ಸಗಟು ಧಾರಣೆ ಕುಸಿದಿದ್ದರೂ ಚಿಲ್ಲರೆ ಮಾರುಕಟ್ಟೆಯಲ್ಲಿ ಇನ್ನೂ ಹಣ್ಣಿನ ಬೆಲೆ ಇಳಿಕೆ ಕಂಡಿಲ್ಲ. ರಸಪೂರಿ, ಬಾದಾಮಿ, ಮಲಗೋವಾ, ಮಲ್ಲಿಕಾ ಸೇರಿ ಪ್ರಮುಖ ತಳಿಯ ಹಣ್ಣುಗಳಲ್ಲವೂ ಚಿಲ್ಲರೆ ಮಾರುಕಟ್ಟೆಯಲ್ಲಿ ದುಬಾರಿಯಾಗಿಯೇ ಇವೆ. ಹಾಪ್‌ಕಾಮ್ಸ್‌ನಲ್ಲಿ ಪ್ರತಿ ಕೆ.ಜಿಗೆ (ಹಣ್ಣು) ಕೇಸರಿ ₹160, ದಶೇರಿ-₹180, ಇಮಾಮ್ ಪಸಂದ್ ₹250ರ ದರದಲ್ಲಿ ಮಾರಾಟವಾಗುತ್ತಿದೆ.

25-05-2025
Prajavani Pg 06

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI ▪ BENGALURU
8
ಸೋಮವಾರ 26 ಮೇ 2025
26 MAY 2025
vittasugi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು

ದೇಸಿ ಬಿತ್ತನೆ ಬೀಜಗಳ ಸಂಗ್ರಹಕ್ಕೆ ನೋಂದಣಿ

ಕೃಷಿ ಇಲಾಖೆಯಿಂದ ಕಾರ್ಯ | ರಾಜ್ಯದಲ್ಲಿವೆ 350ಕ್ಕೂ ಅಧಿಕ ವಿವಿಧ ತಳಿ

■ ಮಂಜುನಾಥ ಕೋಳಿಗುಡ್ಡ ಬೆಳಗಾವಿ

ಅವಸಾನದ ಅಂಚಿನಲ್ಲಿರುವ ದೇಸಿ ಬಿತ್ತನೆ ಬೀಜಗಳ ಸಂರಕ್ಷಣೆ, ಸಂಗ್ರಹ ಮಾಡುವ ನಿಟ್ಟಿನಲ್ಲಿ ಪೂರ್ವಜರ ಕಾಲದಿಂದಲೂ ದೇಸಿ ಬೀಜ ಸಂರಕ್ಷಿಸಿ ಬಿತ್ತನೆ ಮಾಡಿಕೊಂಡು ಬರುತ್ತಿರುವ ರೈತರ ನೋಂದಣಿಗೆ ಕೃಷಿ ಇಲಾಖೆ ಮುಂದಾಗಿದೆ. ಈ ಸಮಿಕ್ಷೆಗಾಗಿ ಕಿಸಾನ್ ನ್ಯೂ ವರ್ಷನ್ ಮೊಬೈಲ್ ಅಪ್ಲಿಕೇಷನ್ ಪರಿಚಯಿಸಿದೆ. ಅತಿವೃಷ್ಟಿ, ಅನಾವೃಷ್ಟಿ, ಅತಿಯಾದ ರಸಗೊಬ್ಬರ ಬಳಕೆಯಿಂದ ತೀವ್ರ ಸಂಕಷ್ಟದಲ್ಲಿರುವ ಕೃಷಿ ವಲಯಕ್ಕೆ ಮರುಜೀವ ನೀಡುವ ಉದ್ದೇಶದಿಂದ ಕೃಷಿ ಇಲಾಖೆಯು ಬದಲಾಗುವ ಹವಾಗುಣಕ್ಕೆ ಹೊಂದಿಕೊಳ್ಳುವ ಗುಣ, ರೋಗ ನಿರೋಧಕ, ಬರ ನಿರೋಧಕ, ಅತಿವೃಷ್ಟಿ ಮೆಟ್ಟಿ ನಿಲ್ಲುವ, ಉತ್ತಮ ರುಚಿ ಗುಣಮಟ್ಟ, ಪೋಷಕಾಂಶ ಹಾಗೂ ಔಷಧ ಗುಣ ಹೊಂದಿರುವ ಶತಮಾನದ ಹಳೆಯ ದೇಸಿ ತಳಿಗಳ ಬೀಜಗಳ ಸಂಗ್ರಹಣೆಗೆ ನಿರ್ಧರಿಸಿದೆ.



2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ: ರಾಜ್ಯದಲ್ಲಿರುವ 75.40 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಪೈಕಿ ಅಂದಾಜು 1ರಿಂದ 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ದೇಸಿ ಬೀಜ ಬಿತ್ತನೆ ಆಗುತ್ತಿವೆ. ಬೆಳಗಾವಿ, ಗದಗ, ವಿಜಯಪುರ, ಹಾವೇರಿ, ಧಾರವಾಡ, ಮೈಸೂರು, ಮಂಡ್ಯ, ಚಿತ್ರದುರ್ಗ, ತುಮಕೂರು, ಕಲಬುರಗಿ, ಕೊಪ್ಪಳ, ಬಳ್ಳಾರಿ ಸೇರಿ ಕೆಲ ಜಿಲ್ಲೆಗಳಲ್ಲಿ ರೈತರು ದೇಸಿ ಬೀಜ ಸಂರಕ್ಷಣೆ ಮಾಡಿ ಪ್ರತಿವರ್ಷ ಬಿತ್ತನೆ ಮಾಡಿಕೊಂಡು ಬರುತ್ತಿದ್ದಾರೆ.

ಸಂರಕ್ಷಣೆಗೆ ಸರ್ಕಾರ ಆದ್ಯತೆ: ಸದ್ಯ ಕೃಷಿ ಇಲಾಖೆ ಮಾಹಿತಿ ಪ್ರಕಾರ ರಾಜ್ಯದಲ್ಲಿ ಭತ್ತ, ಜೋಳ, ಕಡಲೆ, ಗೋಧಿ, ರಾಗಿ, ತೊಗರಿ, ಅವರೆ, ಅಲಸಂದೆ, ಮಡಕಿಕಾಳು, ಹುಚ್ಚೆಳ್ಳು, ಕುಸುಬೆ, ಎಳ್ಳು, ನವಣೆ, ಸಾಮೆ, ಊದಲು ಕೊರಲೆ, ಆರ್ಕ, ಬರಗು ಹೀಗೆ ವಿವಿಧ ಬಗೆಯ 350ಕ್ಕೂ ಅಧಿಕ ವಿವಿಧ ತಳಿಯ ಬಿತ್ತನೆ ದೇಸಿ ತಳಿಯ ಬೀಜಗಳು ಕೆಲವೇ ಕೆಲವು ರೈತರಲ್ಲಿ ಉಳಿದುಕೊಂಡಿವೆ. ಇಂತಹ ದೇಸಿ ಬೀಜಗಳ ಗುಣ, ಪೋಷಕಾಂಶ, ಅವುಗಳ ಮಹತ್ವ ಕುರಿತು ಅಧ್ಯಯನ ಮಾಡಲಾಗುತ್ತಿದೆ. ಕೆಲ ಬಿತ್ತನೆ ಬೀಜಗಳು ಸಕ್ಕರೆ ಕಾಯಿಲೆ ಸೇರಿ ದೊಡ್ಡ ರೋಗಗಳನ್ನು ನಿವಾರಿಸುವ ಔಷಧ ಗುಣ ಒಳಗೊಂಡಿವೆ. ಹೀಗಾಗಿ ದೇಸಿ ಬೀಜಗಳ ಸಂರಕ್ಷಣೆ ಜತೆಗೆ ಬಳಕೆಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

1200 ರೈತರಲ್ಲಿ ಮಾತ್ರ ಲಭ್ಯ

ರಾಜ್ಯದ ವಿವಿಧ ಭಾಗಗಳಲ್ಲಿ ಅಂದಾಜು 1,200 ರೈತರು ಮಾತ್ರ ಪೂರ್ವಜರ ಕಾಲದಿಂದಲೂ ದೇಸಿ ಬಿತ್ತನೆ ಬೀಜ ಬಳಸುತ್ತಿದ್ದಾರೆ. ಇಂತಹ ಬಿತ್ತನೆ ಬೀಜಗಳಲ್ಲಿರುವ ಗುಣ, ಅವುಗಳ ಮಹತ್ವ ಸೇರಿ 250ಕ್ಕೂ ಅಧಿಕ ದೇಸಿ ಬೀಜಗಳ ಕುರಿತು ಸಮಗ್ರ ಅಧ್ಯಯನ ನಡೆಸಲು ಕೃಷಿ ವಿಶ್ವವಿದ್ಯಾಲಯಗಳು ಸಿದ್ಧತೆ ಆರಂಭಿಸಿವೆ. ಅಲ್ಲದೆ, ದೇಸಿ ಬೀಜ ಸಂಗ್ರಹಣೆ ಮಾಡುತ್ತಿರುವ ರೈತರನ್ನು ಗುರುತಿಸಿ ಅವರಿಂದ ಮಾಹಿತಿ ಸಂಗ್ರಹಿಸುತ್ತಿವೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

> ನಮ್ಮಲ್ಲಿ ಪೂರ್ವಜರ ಕಾಲದಿಂದ ದೇಸಿ ಬಿತ್ತನೆ ಬೀಜಗಳನ್ನು ಸಂಗ್ರಹಿಸಿಕೊಂಡು ಬಂದಿರುವ ಮತ್ತು ಅವುಗಳನ್ನು ನಾಟಿ ಮಾಡಿಕೊಂಡು ಬರುತ್ತಿರುವ ರೈತರನ್ನು ಗುರುತಿಸಿ ಸಮಾಜದ ಮುಖ್ಯವಾಹಿನಿ ತರಲು ನೋಂದಣಿ ಅಭಿಯಾನ ಆರಂಭಿಸಿದ್ದೇವೆ. ಜತೆಗೆ ದೇಸಿ ಬೀಜಗಳ ಸಂರಕ್ಷಣೆ ಮಾಡಲಾಗುತ್ತಿದೆ. ನೋಂದಣಿ ಮಾಡಿಕೊಳ್ಳಲು ಮೇ 28ಕೊನೆಯ ದಿನವಾಗಿದೆ.
>
> **| ಶಿವನಗೌಡ ಪಾಟೀಲ** ಕೃಷಿ ಇಲಾಖೆ ಜಂಟಿ ನಿರ್ದೇಶಕ

ದೇಶದಲ್ಲಿ ಅಡಕೆ ಕೃಷಿ ಭವಿಷ್ಯ-ಅಪಾಯ!



■ ಡಾ. ವಿಪ್ಲೇಶ್ವರ ವರ್ಮುಡಿ

ಭಾರತದಲ್ಲಿ ಅಡಕೆ ಕೃಷಿಯನ್ನು ಅನಾದಿ ಕಾಲದಿಂದಲೂ ಪೂರ್ವಜರು ಕೈಗೊಳ್ಳುತ್ತಾ ಬಂದಿದ್ದು, ಇಂದು ವ್ಯವಸ್ಥಿತ-ವಾಣಿಜ್ಯ ರೀತಿಯ ಕೃಷಿಯಾಗಿ ಮಾರ್ಪಟ್ಟಿದೆ. ಸ್ವಾತಂತ್ರ್ಯಪೂರ್ವದಲ್ಲಿ ಅಂತರಿಕ ಆಗತ್ಯಕ್ಕೆ ಅನುಗುಣವಾಗಿ ಉತ್ಪಾದನೆ ಆಗದೇ ಇದ್ದುದರಿಂದ ದೇಶವು ಆಗ್ಗೆಯ ಏಷ್ಯಾ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಈ ಆಮದು ದೇಶಿಯ ಮಾರುಕಟ್ಟೆಯಲ್ಲಿ ಧಾರಣೆ ಕುಸಿತಕ್ಕೆ ದಾರಿ ಮಾಡಿಕೊಟ್ಟ ಕಾರಣ ಬೆಳೆಗಾರರು ಪ್ರತಿಭಟಿಸಿದ ಫಲವಾಗಿ ಸರ್ಕಾರ 1949ರಲ್ಲಿ ಒಂದು ಕೇಂದ್ರೀಯ ಸಮಿತಿ ರಚಿಸಿತ್ತು. ಆ ಸಮಿತಿ ಬೆಳೆಯ ವಿಸ್ತೀರ್ಣ ಹೆಚ್ಚಿಸಲು ಶಿಫಾರಸು ಮಾಡಿ ಮುಂದೆ ಪಂಚವಾರ್ಷಿಕ ಯೋಜನೆಗಳಲ್ಲಿ ಅನುದಾನಗಳು ದೊರಕಿ ಇದರ ವಿಸ್ತೀರ್ಣ ಹಾಗೂ ಉತ್ಪಾದನೆ ಏರುಮುಖ ಹೊಯಿತು.

ನಮ್ಮ ಅಡಕೆಯನ್ನು ಕರ್ನಾಟಕ, ಕೇರಳ ಮತ್ತು ಅಸ್ಸಾಂನಲ್ಲಿ ಪ್ರಮುಖ ಬೆಳೆಯಾಗಿ ಬೆಳೆಯಲಾಗುತ್ತಿದೆ. ಇದರೊಂದಿಗೆ ಮೇಘಾಲಯ, ತಮಿಳುನಾಡು, ಪಶ್ಚಿಮಬಂಗಾಳ, ಮಿಜೋರಾಂ, ಮಹಾರಾಷ್ಟ್ರ, ಆಂಧ್ರಪ್ರದೇಶ, ತ್ರಿಪುರಾ, ಪಾಂಡಿಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ, ಗೋವಾ ಮತ್ತು ನಾಗಾಲ್ಯಾಂಡ್ ರಾಜ್ಯಗಳಲ್ಲಿ ಬೆಳೆಯಲಾಗುತ್ತಿದೆ.

ರಾಜ್ಯವಾರು ಅಡಕೆ ಬೆಳೆ

1.ಕರ್ನಾಟಕ: ಕರ್ನಾಟಕದಲ್ಲಿ ಅಡಕೆ ಕೃಷಿ ವ್ಯಾಪಕವಾಗಿ ವಿಸ್ತರಿಸುತ್ತಿದೆ. ಸಾಂಪ್ರದಾಯಿಕವಾಗಿ ಕರಾವಳಿ, ಮಲೆನಾಡು ಪ್ರದೇಶಕ್ಕೆ ಸೀಮಿತವಾಗಿದ್ದ ಬೆಳೆ ಈಗ ರಾಜ್ಯಾದ್ಯಂತ ಹಬ್ಬಿದೆ. 2015ರ ಸಮಯದಲ್ಲಿ ಬೆಳೆಯ ವಿಸ್ತೀರ್ಣ ಸುಮಾರು 2,75,504 ಹೆಕ್ಟೇರ್ ಆಗಿತ್ತು. ಈಗ 8 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಿದೆ. ಉತ್ಪಾದನೆ ದೃಷ್ಟಿಯಿಂದ 4.3 ಲಕ್ಷ ಟನ್‌ಗಳಿಂದ 12 ಲಕ್ಷ ಟನ್ ಆಗಿದೆ. ಈ ರೀತಿಯಲ್ಲಿ ವಿಸ್ತರಣೆ ಮತ್ತು ಉತ್ಪಾದನೆಗೆ ಮುಖ್ಯ ಕಾರಣ ಹೆಚ್ಚಿನ ಧಾರಣೆ. ಇನ್ನೊಂದು ಬಲಿಯಲ್ಲಿ ಇತರ ಆಹಾರ ಧಾನ್ಯಗಳ ಉತ್ಪಾದನೆಗೆ ಹೆಚ್ಚುತ್ತಿರುವ ವಚ್ಚೆ.

2.ಕೇರಳ: ಕೇರಳದ 14 ಜಿಲ್ಲೆಗಳಲ್ಲಿ ಅಡಕೆ ಕೃಷಿ ಮಾಡಲಾಗುತ್ತಿದೆ. ವಿಸ್ತೀರ್ಣ ಮತ್ತು ಉತ್ಪಾದನೆ ದೃಷ್ಟಿಯಿಂದ ಕ್ರಮವಾಗಿ ಕಾಸರಗೋಡು, ಮಲಪ್ಪುರಂ, ವಯನಾಡ್, ಕೋಝಿಕೋಡ್, ಪಾಲಕ್ಕಾಡ್, ಕಣ್ಣೂರು ಇತ್ಯಾದಿ ಜಿಲ್ಲೆಗಳಿವೆ. ಕಾಸರಗೋಡಿನಲ್ಲಿ ವಿಸ್ತೀರ್ಣ ಮತ್ತು ಉತ್ಪಾದನೆ ಹೆಚ್ಚಾಗುತ್ತಿದೆ. ಕೇರಳದಲ್ಲಿ ಸುಮಾರು ಒಂದು ಲಕ್ಷ ಹೆಕ್ಟೇರ್‌ನಲ್ಲಿ ಕೃಷಿ ಆಗುತ್ತಿದ್ದು ಉತ್ಪಾದನೆ 1 ಲಕ್ಷ ಟನ್ ಆಗಿದೆ.

3.ಅಸ್ಸಾಂ: ಅಸ್ಸಾಂನ ಪ್ರತಿ ಜಿಲ್ಲೆಗಳಲ್ಲೂ ಅಡಕೆ ವ್ಯವಸಾಯ ಆಗುತ್ತಿದ್ದರೂ ಕಮರುಪ್, ಶಿಫಸಾಗರ್ ಜಿಲ್ಲೆಗಳಲ್ಲಿ ಅಧಿಕವಾಗಿದೆ. ಅಡಕೆ ವಿಸ್ತೀರ್ಣ ಸುಮಾರು 68 ಸಾವಿರ ಹೆಕ್ಟೇರ್ ಆಗಿದ್ದು, ಉತ್ಪಾದನೆ ಸುಮಾರು 51 ಸಾವಿರ ಟನ್ ಆಗಿದೆ.

4.ಮೇಘಾಲಯ: ಮೇಘಾಲಯದಲ್ಲಿ ಸುಮಾರು 19,000 ಹೆಕ್ಟೇರ್ ಪ್ರದೇಶಕ್ಕೆ ಅಡಕೆ ಬೆಳೆ ವ್ಯಾಪಿಸಿದ್ದು, ಉತ್ಪಾದನೆ 25,000 ಟನ್ ಆಗಿದೆ.

5.ಮಿಜೋರಾಂ: ಮಿಜೋರಾಂನಲ್ಲಿ 13,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಸಿ 10,000 ಟನ್ ಉತ್ಪಾದಿಸಲಾಗುತ್ತದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದಲ್ಲಿ ಸುಮಾರು 24,000 ಟನ್, ತ್ರಿಪುರದಲ್ಲಿ 16000,ಪಶ್ಚಿಮ ಬಂಗಾಳದಲ್ಲಿ 20,000, ಪಾಂಡಿಚೇರಿ 11,000 ಟನ್ ಮತ್ತು ಆಂಧ್ರಪ್ರದೇಶ, ಗೋವಾ ರಾಜ್ಯಗಳಲ್ಲಿ ತಲಾ 4,000 ಟನ್ ಉತ್ಪಾದನೆ ಆಗುತ್ತಿದೆ.

ದೇಶದಲ್ಲಿರುವ ಸುಮಾರು ಎಂಟು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಕೆ ಕೃಷಿ ಆಗುತ್ತಿದ್ದು, ಸುಮಾರು ಹದಿನಾರು ಲಕ್ಷ ಟನ್ ಅಡಕೆ ಉತ್ಪಾದನೆ ಆಗುತ್ತಿದೆ. ಈ ರೀತಿಯ ಬೆಳವಣಿಗೆ ಕಳೆದ ಹತ್ತು ವರ್ಷಗಳಿಂದ ಕಂಡುಬರುತ್ತಿದ್ದು, ಇದು ಇನ್ನಷ್ಟು ವೇಗವಾಗಿ ಮುಂದುವರಿಯುವ ಲಕ್ಷಣ ಗೋಚರಿಸುತ್ತಿದೆ.

ಅಡಕೆ ಬಳಕೆಯ ವಿಧಾನ



ಕರ್ನಾಟಕದಲ್ಲಿ ಬೆಳೆಯುವ ಅಡಕೆಯಲ್ಲಿ ಎರಡು ವಿಧ. ಮೊದಲನೆಯದು ಚಾಲಿ, ಎರಡನೆಯದ್ದು ಕೆಂಪಡಕೆ. ಇವೆರಡನ್ನೂ ಬೀಡಾ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಕೆಂಪಡಕೆಯನ್ನು ಪಾನ್ ಮಸಾಲ, ಸಿಹಿ ಸುಪಾರಿ, ಗುಟ್ಟಾ ಮತ್ತಿತರ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಧಾರ್ಮಿಕ ಆಚರಣೆಗಳಲ್ಲೂ ಬಳಕೆಯಾಗುವ ಈ ಉತ್ಪನ್ನಗಳಿಗೆ ಅಂತರಿಕ ಹಾಗೂ ಬಾಹ್ಯ ಬೇಡಿಕೆ ಇದೆ. ಅಡಕೆಯನ್ನು ಹೆಚ್ಚಾಗಿ ಬಳಕೆ ಮಾಡುವುದು ಉತ್ತರ ಹಾಗೂ ಪಶ್ಚಿಮ ರಾಜ್ಯಗಳಲ್ಲಿ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಕರಾವಳಿಯ ಚಾಲಿ ಅಡಕೆಗೆ ಹೆಚ್ಚಿನ ಬೇಡಿಕೆ ಇದೆ. ಇನ್ನುಳಿದಂತೆ ಕೆಂಪಡಕೆಗೆ ಉತ್ತರದ ಭಾಗಗಳಲ್ಲಿ ಮೌಲ್ಯವರ್ಧನೆ ಮಾಡುವ ಉದ್ದಿಮೆಗಳಿವೆ. ಇನ್ನು ಅಡಕೆಯ ಸಂಸ್ಕರಣೆ ಮಾಡುವ ಸಣ್ಣ ಸಣ್ಣ ಘಟಕಗಳು ಉತ್ತರ ಭಾರತದಲ್ಲಿ ಇದ್ದು, ಇದನ್ನು ಅವಲಂಬಿಸಿ ಸಾವಿರಾರು ಕುಟುಂಬಗಳಿವೆ. ಇನ್ನು ವಿದೇಶಿ ಮಾರುಕಟ್ಟೆಗೆ ಅಡಕೆಯ ವಿವಿಧ ಉತ್ಪನ್ನಗಳೂ ಆಗುತ್ತಿವೆ. ಭಾರತ ಕಳೆದ ಸಾಲಿನಲ್ಲಿ ಪ್ರತ್ಯಕ್ಷವಾಗಿ ಸುಮಾರು ಹನ್ನೊಂದು ಸಾವಿರ ಟನ್ ಅಡಕೆ ಉತ್ಪನ್ನಗಳನ್ನು ರಫ್ತು ಮಾಡಿದೆ. ಒಟ್ಟಾಗಿ ಇದರ ಇತರ ಉಪಯೋಗಗಳ ಬಗ್ಗೆ ಅಧ್ಯಯನ ಮತ್ತು ನಿರೂಪಿತ ಮಟ್ಟದಲ್ಲಿ ಆಗಿಲ್ಲ. ಭಾರತ ತನ್ನ ಅಂತರಿಕ ಬೇಡಿಕೆಯನ್ನು ಈಡೇರಿಸಲು ಮೊದಲಿಂದಲೂ ಆಮದಿಗೆ ಶರಣಾಗುತ್ತಿದ್ದು, ಈಗ ಒಂದು ಅಂದಾಜಿನಂತೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸುಮಾರು ಒಂದರಿಂದ ಎರಡು ಲಕ್ಷ ಟನ್ ಅಡಕೆಯನ್ನು ಆಮದು ಮಾಡಿಕೊಳ್ಳುತ್ತಿದೆ. ಈ ಆಮದು ಮ್ಯಾನ್ಮಾರ್, ಶ್ರೀಲಂಕಾ ಇತ್ಯಾದಿ ರಾಷ್ಟ್ರಗಳಿಂದ ಆಗುತ್ತದೆ.



ಆಪಾಯಗಳೇನು?

ಭಾರತದಲ್ಲಿ ಅಡಕೆ ಬೆಳೆಯ ವಿಸ್ತೀರ್ಣ ಮತ್ತು ಉತ್ಪಾದನೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದರ ಬಳಕೆಯೂ ಹೆಚ್ಚಾಗಿ ದೇಶ ಆಮದು ಮಾಡುತ್ತಿದೆ. ದರ ಹೆಚ್ಚಾದ ಕಾರಣ ವಿಸ್ತೀರ್ಣ ಹೆಚ್ಚಾಗುತ್ತಿದ್ದರೂ ಇನ್ನೊಂದು ಬಲಿಯಲ್ಲಿ ಬಳಕೆ ಹೆಚ್ಚಾಗಿ ಬೇಡಿಕೆಯೂ ಹೆಚ್ಚುತ್ತಿದೆ. ಹೀಗಿದ್ದರೂ ಕ್ಷೇತ್ರ ಆಪಾಯದ ಸ್ಥಿತಿಯಲ್ಲಿದೆಯೇ ಎಂಬ ಪ್ರಶ್ನೆ ಮೂಡುತ್ತಿದೆ. ಆಪಾಯದಲ್ಲಿದೆ ಎನ್ನುವುದನ್ನು ಕೆಳಗಿನ ಅಂಕಗಳು ಪುಷ್ಟೀಕರಿಸುತ್ತವೆ.

1. ಆಡಕೆ ಬಳಕೆ ಆಗುವುದು ತಿನ್ನುವ ಹಣ್ಣುಗಾವಾಗಿ. ಈ ಹಣ್ಣಾಸ ಆಡಕೆಯೊಂದಿಗೆ ತಂಬಾಕನ್ನು ಸೇರಿಸಿಕೊಂಡು ಆಗುತ್ತಿದೆ. ಗುಟ್ಟಾಗೆ ಹೆಚ್ಚಿನ ಬೇಡಿಕೆ ಇದೆ. ಮುಂದಿನ ದಿನಗಳಲ್ಲಿ ಗುಟ್ಟಾ ಸಿಷೇಧವಾದರೆ ಅಡಕೆಗೆ ಏನು ಗತಿ ಎಂಬ ಪ್ರಶ್ನೆ ಏಳುತ್ತದೆ.
2. ವಿಶ್ವ ಆರೋಗ್ಯ ಸಂಸ್ಥೆ ಅಡಕೆ ಕ್ಯಾನ್ಸರ್‌ಕಾರಕ ಎಂಬುದಾಗಿ ಹೇಳಿದೆ. ಈ ಬಗ್ಗೆ ನಮ್ಮಲ್ಲೂ ದ್ವನಿ ಕೇಳಿಬರುತ್ತಿದೆ. ಇವೆಲ್ಲ ಯಾವ ಹಂತಕ್ಕೆ ತಲುಪುತ್ತವೆ ಎಂದು ಊಹಿಸಲು ಆಸಾಧ್ಯ. ಇದರೊಂದಿಗೆ ಸುಪ್ರೀಂಕೋರ್ಟ್‌ನಲ್ಲಿ ದಾವೆ ನಡೆಯುತ್ತಿದ್ದು, ತೀರ್ಪು ಯಾವ ರೀತಿ ಬರಬಹುದೆಂದು ಗೊತ್ತಿಲ್ಲ.
3. ಒಂದೊಮ್ಮೆ ಅಡಕೆ ಹಾನಿಕಾರಕ ಎಲ್ಲ ಎಂಬ ತೀರ್ಪು ಬಂದರೆ ಈಗಿರುವ ಬೇಡಿಕೆ ಮುಂದೆಯೂ ಇರಬಹುದೇ ಎಂಬ ಪ್ರಶ್ನೆ ಸಹಜ. ಆದರೆ ಅಡಕೆ ಒಂದನ್ನೇ ತಿನ್ನುವ ಗ್ರಾಹಕರ ಸಂಖ್ಯೆ ತುಂಬಾ ಕಡಿಮೆ. ಆಗ ಈ ಮಟ್ಟಿನ ಉತ್ಪಾದನೆಯನ್ನು ಏನು ಮಾಡುವುದು ಎಂಬುದು ಸಮಸ್ಯೆಗಳಿಗೆ ದಾರಿಮಾಡಿಕೊಡುತ್ತದೆ.
4. ಸರ್ಕಾರಗಳು ಈ ಮೊದಲು ಕ್ಷೇತ್ರಕ್ಕೆ ಸಮಸ್ಯೆಗಳು ಬಂದಾಗ ಹಲವು ಸಮಿತಿಗಳನ್ನು ನೇಮಿಸಿದ್ದವು. ಅವುಗಳ ವರದಿಗಳಲ್ಲಿ 2001ರಿಂದ ಹಿಡಿದು ಈ ತನಕ ಅಡಕೆ ಬೆಳೆಯ ವಿಸ್ತರಣೆಗೆ ಕಡಿವಾಣ ಹಾಕಬೇಕೆಂದು ಹೇಳಿದ್ದು, ಇದರೊಂದಿಗೆ ಕಾಲುವೆ ಮತ್ತು ಬೋರ್‌ವೆಲ್ ನೀರು ಬಳಸಿ ಅಡಕೆ ಕೃಷಿ ಮಾಡಬಾರದು ಎಂದು ಹೇಳಿವೆ. ಅಲ್ಲದೆ ಗುಟ್ಟಾ ಬಳಕೆ ಬಗ್ಗೆ ಅಪಸ್ವರ ಎತ್ತಿದ್ದು, ಇವೆಲ್ಲ ಅಡಕೆಗೆ ಪೂರಕ ಆಗಿಲ್ಲ.
5. ಹಲವು ವರ್ಷಗಳಿಂದ ಸರ್ಕಾರಗಳು ಅಡಕೆಗೆ ಕೊಡುವ ಬೆಂಬಲವನ್ನು ಹಂತ ಹಂತವಾಗಿ ಸಿಲ್ಲಿಸುತ್ತಿದ್ದು, ಇದೂ ಕೂಡ ಆಪಾಯ ತಂದೊಡ್ಡಬಹುದು.
6. ಅಡಕೆಯಲ್ಲಿ ಅನೇಕ ಔಷಧೀಯ ಗುಣಗಳಿರುವ ಬಗ್ಗೆ ಪುರಾವೆಗಳಿದ್ದರೂ ನಮ್ಮಲ್ಲಿ ಇವುಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಆದ್ದರಿಂದ ಬದಲೀ ಬಳಕೆ ಹೇಗೆ ಎಂಬುದು ಪ್ರಶ್ನೆ.
7. ಒಂದೊಮ್ಮೆ ಅಡಕೆ ನಿಷೇಧವಾದರೆ ಸಾಂಪ್ರದಾಯಿಕ ಪ್ರದೇಶಗಳಲ್ಲಿರುವ ಮಣ್ಣಿನ ಗುಣ ಅಡಕೆಗೆ ಸೀಮಿತ ಆಗಿದ್ದು ಇಲ್ಲಿ ಮುಂದೇನು ಎಂಬ ಪ್ರಶ್ನೆ ಏಳುತ್ತದೆ. ಇನ್ನೊಂದು ಬದಿಯಲ್ಲಿ ಆಸಾಂಪ್ರದಾಯಿಕ ಪ್ರದೇಶಗಳಲ್ಲಿ ಮಣ್ಣು ಮತ್ತು ಕಾಲುವೆ ನೀರು ಆಹಾರ ಧಾನ್ಯಗಳ ಕೃಷಿಗೆ ಪೂರಕ ಆಗಿದ್ದು, ಆಲ್ಲಿ ಸಮಸ್ಯೆಗಳು ಬರುವುದು ಕಡಿಮೆ.
8. ಅಡಕೆ ಕೃಷಿ ಆಸಾಂಪ್ರದಾಯಿಕ ಪ್ರದೇಶಗಳಿಗೆ ವಿಸ್ತರಿಸುತ್ತಾ ಹೋದರೆ ಮುಂದೆ ಆಪಾಯಕ್ಕೆ ಏನು ಮಾಡುವುದು ಎಂಬುದು ಪ್ರಶ್ನೆ.
9. ಅಡಕೆ ಕ್ಷೇತ್ರ ಇಂದು ಕಾರ್ಮಿಕರ ಆಭಾವ, ಕೀಟಬಾಧೆ, ನಾನಾ ರೀತಿಯ ರೋಗಗಳು, ಧಾರಣೆಯಲ್ಲಿ ಏರುಪೇರು, ಆಮದು, ನೀರಿನ ಆಭಾವ ಇತ್ಯಾದಿ ಸಮಸ್ಯೆಗಳಿಂದ ಬಳಲುತ್ತಿದೆ. ಇವೆಲ್ಲ ಅಡಕೆಯ ಭವಿಷ್ಯ ಎಷ್ಟು ಕಠಿಣ ಎಂಬುದನ್ನು ತಿಳಿಹೇಳುತ್ತಿದೆ.

(ಲೇಖಕರು: ಕೃಷಿ, ಮಾರುಕಟ್ಟೆ, ಆರ್ಥಿಕ ತಜ್ಞರು)

ಇತರ ಉತ್ಪನ್ನ ತಯಾರಿ ಕಡೆ ಗಮನ ಸೂಕ್ತ

1961ರಲ್ಲಿ ಭಾರತದಲ್ಲಿ ಉತ್ಪಾದನೆ ಆಗುತ್ತಿದ್ದ ಆಡಕೆ ಪ್ರಮಾಣ ಸುಮಾರು 1,20,000 ಟನ್, ಅದು 2004ಕ್ಕೆ 4,39,000 ಟನ್, 2014ಕ್ಕೆ 7.1 ಲಕ್ಷ ಟನ್, 2023ರಲ್ಲಿ 11 ಲಕ್ಷ ಟನ್. ಆದರೀಗ ಇದು ಸುಮಾರು 16 ಲಕ್ಷ ಟನ್ ಆಗಿದೆ. ನಮ್ಮಲ್ಲಿ ಬೆಳೆ ಹೆಚ್ಚಾದಂತೆ ಬೆಲೆಯೂ ಹೆಚ್ಚಾಗುತ್ತಾ ಬಂದಿದೆ. ಆದರೆ ಮುಂದೆ ಪೂರೈಕೆ ಹೆಚ್ಚಾದಲ್ಲಿ ಬೆಲೆಯೂ ಕುಸಿಯಬಹುದು. ಇದರೊಂದಿಗೆ ಅಂತರಿಕ ಹಾಗೂ ಬಾಹ್ಯ ಒತ್ತಡಗಳು ಕ್ಷೇತ್ರಕ್ಕೆ ಆಪಾಯ ಮತ್ತು ಅವಕಾಶ ತಂದೊಡ್ಡಬಹುದು. ಈ ನಿಟ್ಟಿನಲ್ಲಿ ಬೆಳೆಗಾರರು ಗಮನಹರಿಸುವುದು ಸೂಕ್ತ. ಇದರೊಂದಿಗೆ ಅಡಕೆ ಕ್ಷೇತ್ರ ಇನ್ನಾದರೂ ಆಡಕೆಯ ಮೌಲ್ಯವರ್ಧಿತ ಉತ್ಪನ್ನ, ಔಷಧೀಯ ತಯಾರಿ ಇತ್ಯಾದಿಗಳ ಕಡೆಗೆ ಗಮನಹರಿಸುವುದು ಕ್ಷೇಮಕರ. ಈಗಾಗಲೇ ಆರೇಕಾ ಟೀ, ಮಾಲ್ಟ್, ಹುಬಲ್ ಸುಪಾರಿ, ದಿಯಾ ಆರೇಕಾ, ಆಯುರ್ವೇದಿಕ್ ತಾಂಬೂಲ, ಆರೇಕಾ ವೈನ್ ಇತ್ಯಾದಿಗಳ ತಯಾರಿ ನಡೆದಿದ್ದು, ಇವೆಲ್ಲ ಪೋಷಾಹಕ ದೊರಕಬೇಕಿದೆ. ಹೀಗಾದಲ್ಲಿ ಅಡಕೆ ಕೃಷಿಕರು ಸ್ವಲ್ಪ ನೆಮ್ಮದಿ ಕಂಡುಕೊಳ್ಳಬಹುದು.

ರೈತರ ಕೃಷಿ ಸಾಲ ದುರ್ಬಳಕೆ!

ನಿಯಮಗಳನ್ನು ಗಾಳಿಗೆ ತೂರಿ

ಹಲಸಿನ ಬೀಜಕ್ಕೂ ಮಾರುಕಟ್ಟೆ

ಸಹಕಾರ ಸಂಸ್ಥೆಯಿಂದ ದೊಡ್ಡ ಪ್ರಮಾಣದಲ್ಲಿ ಖರೀದಿ

■ ಕೃಷ್ಣಮೂರ್ತಿ ಟಿ.ಕೆರೆಗದ್ದೆ ಶಿರಸಿ
keregaddemurthy@gmail.com

ಮಲೆನಾಡಿನ ತೋಟದಂಚು, ಬೆಟ್ಟ ಬೇಣಗಳಲ್ಲಿ ಬೆಳೆಯುವ ಹಲಸಿನ ಕಾಯಿಯ ಮೌಲ್ಯವರ್ಧನೆಯಾಗುತ್ತಿದೆ. ಈಗ ಹಲಸಿನ ಬೀಜಕ್ಕೂ ಭಾರಿ ಬೇಡಿಕೆ ಬಂದಿದೆ. ಬೀಜದ ಪೌಡರ್ ತಯಾರಿಸಿ ಮಾರುಕಟ್ಟೆ ಕಲ್ಪಿಸುವ ಯೋಜನೆಯೊಂದನ್ನು ನಗರದ ಕದಂಬ ಮಾರ್ಕೆಟಿಂಗ್ ಸಹಕಾರ ಸಂಸ್ಥೆಯು ರೂಪಿಸಿದೆ.

ಪೌಡರ್ ತಯಾರಿಸಿ ಮಾರಾಟ

ಗ್ರಾಮೀಣ ಸ್ತ್ರೀಯರಿಗೆ ಅನುಕೂಲ

ಸಾಮಾನ್ಯವಾಗಿ ಹಲವು ವರ್ಷಗಳಿಂದ ಹಲಸಿನ ಮೇಳ ನಡೆಸಿ ಹಲಸಿನ ಸೊಳೆಯಿಂದ ಹಪ್ಪಳ, ಚಿಪ್ಸ್ ತಯಾರಿಕೆಯನ್ನು ವ್ಯಾಪಕವಾಗಿ ಮೌಲ್ಯವರ್ಧನೆಗೊಳಿಸಿ ಮಾರುಕಟ್ಟೆ ಮಾಡುತ್ತಿರುವ ಸಂಸ್ಥೆಯು ಆ ಮೂಲಕ ಗ್ರಾಮೀಣ ಭಾಗದ ಮಹಿಳೆಯರಿಗೆ ಹಲಸನ್ನು ಆದಾಯದ ಮೂಲವಾಗಿಸುವ ಕಾರ್ಯ ಮಾಡಲಾಗಿದೆ. ಅದಕ್ಕಿಂತ ಹೆಚ್ಚಾಗಿ ತೊಳೆಯೊಳಗಿನ ಬೀಜವನ್ನೂ ಈಗ ಖರೀದಿಸಲಾಗುತ್ತಿದೆ. ಆದರಿಂದ ಪುಡಿ ತಯಾರಿಸಿ ಮಾರುಕಟ್ಟೆ ಮಾಡುವ ಕಾರ್ಯವೂ ನಡೆಯುತ್ತಿದ್ದು, ಹೀಗಾಗಿ ಬಿಸಾಡುತ್ತಿದ್ದ ಹಲಸಿನ ಬೀಜಕ್ಕೂ ಬೆಲೆ ಸಿಗುವಂತಾಗಿದೆ. ಆದರೆ ಇದನ್ನು ಬಿಸಾಕದೆ ಹಳ್ಳಿಗರು ಸಂಸ್ಥೆಗೆ ತಂದು ನೀಡಿದರೆ ಆದಾಯವೂ ಲಭಿಸುತ್ತದೆ.

ಟನ್‌ಗಟ್ಟಲೆ ಖರೀದಿ ಗುರಿ: ''ಕಳೆದ ಎರಡು ವರ್ಷದ ಹಿಂದೆ ಕದಂಬ ಮಾರ್ಕೆಟಿಂಗ್‌ನಿಂದ ಸುಮಾರು 1.50 ಕ್ವಿಂಟಲ್ ಬೀಜ ಖರೀದಿಸಲಾಗಿತ್ತು. ಅದರಲ್ಲಿ25 ಕೆಜಿಯಷ್ಟು ಪೌಡರ್ ಮಾಡಿ ಮಾರಾಟ ಮಾಡಲಾಗಿತ್ತು. ಪ್ರೊಟೀನ್ ಯುಕ್ತವಾದ ಈ ಪೌಡರ್‌ಗೆ ಬೇಡಿಕೆಯಿದೆ. ಈ ವರ್ಷ ಈಗಾಗಲೇ 1.10 ಕ್ವಿಂಟಲ್ ಬೀಜ ಖರೀದಿಸಿ ಶಿವಮೊಗ್ಗಕ್ಕೆ ಕಳುಹಿಸಲಾಗಿದೆ. ಭವಿಷ್ಯದಲ್ಲಿ ಹಲಸಿನ ಬೀಜವನ್ನು ಟನ್ ಗಟ್ಟಲೇ ಖರೀದಿಸುವ ಉದ್ದೇಶವಿದೆ. ಅದನ್ನು ಸಂಸ್ಥರಿಸಿ ಕದಂಬ ಬ್ರಾಂಡ್‌ನಲ್ಲಿ ಮಾರುಕಟ್ಟೆ ಮಾಡುವ ಗುರಿ ಹೊಂದಲಾಗಿದೆ. ಆದರೆ ಈ ಬಗ್ಗೆ ರೈತರಲ್ಲಿ ಜಾಗೃತಿ ಬರಬೇಕಿದೆ. ಬೀಜವನ್ನು ಹಾಳು ಮಾಡದೇ ಮಾರಾಟಕ್ಕೆ ತರಬೇಕು,'' ಎನ್ನುತ್ತಾರೆ ಕದಂಬ ಮಾರ್ಕೆಟಿಂಗ್ ಸಂಚಾಲಕ ವಿಶ್ವೇಶ್ವರ ಭಟ್ಟ ಕೋಟಿಮನೆ.



V-karantakaPg 04

ಕೆ.ಜಿಗೆ 18-20 ರೂ. ದರ

ಕದಂಬ ಮಾರ್ಕೆಟಿಂಗ್ ಸಂಸ್ಥೆ ಕಳೆದ ಮೂರು ವರ್ಷಗಳಿಂದ ಮಾರಾಟಕ್ಕೆ ಬಂದ ಅಲ್ಪಸ್ವಲ್ಪ ಹಲಸಿನ ಬೀಜೆಯನ್ನು ಖರೀದಿಸಿ ಮೌಲ್ಯವರ್ಧನೆ ಮಾಡುವ ಕಾರ್ಯ ಮಾಡುತ್ತಿದೆ. ಈ ಬಾರಿ ಕೆಜಿ ಹಲಸಿನ ಬೀಜೆಗೆ 18-20 ರೂ.ವರೆಗೂ ದರ ದೊರೆಯುತ್ತಿದೆ.

Meghalaya's new cave-dwelling fish adapts to streams overground: study

Rahul Karmakar
GUWAHATI

An underground cave in Meghalaya, in focus for a conflict over a Shivalinga-like stone formation, has yielded a new-to-science fish that adapts to streams overground.

A team of zoologists, led by Kangkan Sarma of Gauhati University's Department of Zoology, has recorded *Schistura densiclava* as a new species of troglophile loach from Krem Mawjymbuin in the State's East Khasi Hills district.

A troglophile animal is essentially a cave-dwelling animal that can thrive and reproduce in epigean, or aboveground, environments.

Mr. Sarma and D. Khlur Baiaineh Mukhim are the lead authors of the study published in the latest issue of the *Journal of Fish Biology*. The other authors are Hrishikesh Choudhury, Rajdeep Das, Rejani Chandran, Rajeev K. Singh, Deisakee P. Warbah, Wandalin Lyngdoh, Uttam Kumar Sarkar, and Dandadhar Sarma.

The newly described loach, a bottom-dwelling fish with barbels hanging from the mouth, was found in a cool, fast-flowing stream about 60 metres inside the cave, where the temperature was 18 degrees Celsius and oxygen levels were low.

Belonging to the Nemacheilidae family, *Schistura densiclava* is adapted to the dark, subterranean environment but can also survive in surface waters. According to the authors, it retains pigment and eyesight, unlike other cave-dwelling fishes.

The newly described loach has a pale yellow-green body "marked with 14-20 greyish black to faint black bars" and a thick stripe near the dorsal fin. This stripe gave the loach its name - *densiclava*, which means "thick stripe" in Latin.

The study said the *Schistura densiclava* males are slimmer with irregular patterns and puffier cheeks, while the females are sturdier with consistent markings.

"Genetic testing confirmed it as a completely new species... The distribution of the new species is limited to the cave, which suggests endemism in this cave system," the researchers said.



Hindu Pg 08

Schistura densiclava, a new species of troglophile loach, was found in East Khasi Hills district. SPECIAL ARRANGEMENT

'ಡಿಜಿಟಲ್ ಕೃಷಿ ಸೇವೆಗಳ ಕೇಂದ್ರ' ಸ್ಥಾಪನೆ । ಪ್ರಸಕ್ತ ಸಾಲಿಗೆ 3 ಕೋಟಿ ರೂ. ವೆಚ್ಚ

ಕೃಷಿಗೆ AI ತಂತ್ರಜ್ಞಾನ ಸ್ಪರ್ಶ

■ ಕೆಂಚೇಗೌಡ ಬೆಂಗಳೂರು
kenche.gowda@timesofindia.com

ಜಾಗತಿಕ ಮಟ್ಟದಲ್ಲಿ ಡಿಜಿಟಲ್, ಕೃತಕ ಬುದ್ಧಿಮತ್ತೆ ಹಾಗೂ ಜಿಯೋ ಸ್ಪೇಷಿಯಲ್ ಕ್ಷೇತ್ರದಲ್ಲಿನ ಕ್ರಾಂತಿಕಾರಕ ಆವಿಷ್ಕಾರಗಳನ್ನು ಕೃಷಿ ಕ್ಷೇತ್ರಕ್ಕೆ ಪರಿಚಯಿಸುವ ಮಹತ್ವಾಕಾಂಕ್ಷಿ ಪ್ರಯತ್ನಕ್ಕೆ ರಾಜ್ಯ ಸರಕಾರ ಕೈಹಾಕಿದೆ. ರೈತರು ಹಾಗೂ ನೀತಿ ನಿರೂಪಕರಿಗೆ ಅನುಕೂಲವಾಗುವಂತೆ ಬೆಳೆ ಮಾಹಿತಿ ವ್ಯವಸ್ಥೆ ಬಲಪಡಿಸಲು ಹಾಗೂ ಬೆಳೆಗಳಲ್ಲಿ ಉತ್ಪಾದಕತೆ ಹೆಚ್ಚಿಸುವ ಉದ್ದೇಶದಿಂದ 'ಡಿಜಿಟಲ್ ಕೃಷಿ ಸೇವೆಗಳ ಕೇಂದ್ರ' ಸ್ಥಾಪನೆಗೆ ಸರಕಾರ ಆದೇಶ ಹೊರಡಿಸಿದ್ದು, ಈ ಉದ್ದೇಶಕ್ಕೆ ಅನುದಾನ ಬಿಡುಗಡೆ ಮಾಡಿದೆ.

ಕೃಷಿ ಚಟುವಟಿಕೆಗಳಲ್ಲಿ ತಂತ್ರಜ್ಞಾನವನ್ನು ಸಮರ್ಪಕ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಪ್ರಮುಖ ಉದ್ದೇಶವಾಗಿದ್ದು, ಕೇಂದ್ರ ಮತ್ತು ರಾಜ್ಯದ ನಾನಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಡಿಜಿಟಲ್ ಕೃಷಿ ಸೇವೆಗಳ ಕೇಂದ್ರ ಕಾರ್ಯನಿರ್ವಹಿಸಲಿದೆ. ಉಪಗ್ರಹ ಆಧಾರಿತ ನಿಖರ ನಕ್ಷೆಗಳ ಮಾಹಿತಿಯೊಂದಿಗೆ ಸಮಸ್ಯಾತ್ಮಕ ಹಂತದಲ್ಲಿರುವ ಕೃಷಿ ಭೂನಕ್ಷೆಗಳನ್ನು ಸಿದ್ಧಪಡಿಸಿ, ಬೆಳೆ ಬೆಳೆಯಲು ವಿಶೇಷ ಸಲಹೆಗಳನ್ನು ನೀಡುವ ಕೆಲಸವನ್ನು ಈ ಕೇಂದ್ರ ಮಾಡಲಿದೆ.

ವಿಶೇಷವಾಗಿ ರಾಜ್ಯದ ಒಣಭೂಮಿ ಕೃಷಿಯ ಪ್ರಮುಖ ಸವಾಲುಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಪರಿಹರಿಸುವ ಗುರಿಯಿಂದ ಈ ಯೋಜನೆಯನ್ನು ಜಾರಿ ಮಾಡಲಾಗುತ್ತಿದ್ದು, ಮುಂದುವರಿದ ದೇಶಗಳಲ್ಲಿರುವಂತೆ ತಂತ್ರಜ್ಞಾನದ ಗರಿಷ್ಠ ಲಾಭವನ್ನು ಎಲ್ಲ ವರ್ಗದ ರೈತರಿಗೆ ತಲುಪಿಸುವ ಮಹತ್ವಾಕಾಂಕ್ಷೆ ಹೊಂದಲಾಗಿದೆ. ಸಮಸ್ಯೆಗಳು ಎದುರಾದ ಸಂದರ್ಭಗಳಲ್ಲಿ ರೈತರು ಸೂಕ್ತ ನಿರ್ಮಾನ ಕೈಗೊಳ್ಳಲು ಅಗತ್ಯ ನೆರವು ನೀಡುವ ಹಾಗೂ ಪೂರಕ ಅಭಿಪ್ರಾಯ ನೀಡುವ ಸಲಹಾತ್ಮಕ ಕೆಲಸವನ್ನು ಈ ಕೇಂದ್ರ ಮಾಡಲಿದೆ.



- ಬೆಳೆ ಮಾಹಿತಿ ವ್ಯವಸ್ಥೆ ಬಲಪಡಿಸಲು ಅನುಕೂಲ
- ಬೆಳೆಗಳಲ್ಲಿ ಉತ್ಪಾದಕತೆ ಹೆಚ್ಚಿಸುವ ಉದ್ದೇಶ
- ರೈತರಿಗೆ ತಂತ್ರಜ್ಞಾನದ ಗರಿಷ್ಠ ಲಾಭ ತಲುಪಿಸುವ ಗುರಿ

ಕೃಷಿಗೆ ಸಂಬಂಧಿಸಿದ ಎಲ್ಲ ದತ್ತಾಂಶಗಳನ್ನು ಒಂದುಗೂಡಿಸಿ ರೈತರು, ಅಧಿಕಾರಿಗಳಿಗೆ ಬೆಳೆಗಳ ಕುರಿತಂತೆ ಸ್ಪಷ್ಟ ತೀರ್ಮಾನಕ್ಕೆ ಬರಲು ನಿಖರ ಮಾಹಿತಿ ನೀಡುವ ಕೆಲಸವನ್ನು ಈ ಕೇಂದ್ರ ನಿರ್ವಹಿಸಲಿದ್ದು, ಆಧುನಿಕ ತಂತ್ರಜ್ಞಾನದ ಲಾಭವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ. ಈ ಕೇಂದ್ರ ಆರಂಭಕ್ಕೆ ಸರಕಾರಿ ಆದೇಶ ಹೊರಬಿದ್ದಿದ್ದು, ಪ್ರಕ್ರಿಯೆ ಶುರುವಾಗಿದೆ. ಇದು ಕೃಷಿ ವಲಯದಲ್ಲಿ ಮಹತ್ವದ ಸುಧಾರಣೆಗೆ ವೇದಿಕೆಯಾಗಲಿದೆ.

- ಡಾ.ಜೆ.ಟಿ.ಪುತ್ರ, ಕೃಷಿ ಇಲಾಖೆ ನಿರ್ದೇಶಕ

ಕಮಾಂಡ್ ಕಂಟ್ರೋಲಿಂಗ್

ಹವಾಮಾನ ಸಂಬಂಧಿ ಮಾಹಿತಿ, ಮಣ್ಣಿನ ವಿವರ, ಬೆಳೆ ಮಾಹಿತಿ, ವರುಣ ಮಿತ್ರ ಸೇರಿ ಕೃಷಿ ಮತ್ತು ಕೃಷಿಕರಿಗೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯ ಸರಕಾರದ ನಾನಾ ಸಂಸ್ಥೆಗಳ ಎಲ್ಲ ದತ್ತಾಂಶಗಳನ್ನು ಒಂದೇ ಸೂರಿನಡಿ ತಂದು ವಿಶ್ಲೇಷಣಾತ್ಮಕ ಅಭಿಪ್ರಾಯದೊಂದಿಗೆ ನಿಖರ ತೀರ್ಮಾನ ಕೈಗೊಳ್ಳಲು ಸಲಹಾತ್ಮಕವಾಗಿ ಈ ಕೇಂದ್ರ ಕೆಲಸ ಮಾಡಲಿದೆ. ಕೃಷಿ ಆಯುಕ್ತಾಲಯದಲ್ಲಿ ಈ ಕೇಂದ್ರ ಸ್ಥಾಪನೆಯಾಗಲಿದ್ದು, 11.41 ಕೋಟಿ ರೂ. ವೆಚ್ಚದ ಈ ಯೋಜನೆಗಾಗಿ ಈ ಸಾಲಿನಲ್ಲಿ3 ಕೋಟಿ ರೂ. ವೆಚ್ಚಮಾಡಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಂಬಂಧಿತ ಸಂಸ್ಥೆಗಳ ಕಮಾಂಡ್ ಮತ್ತು ಕಂಟ್ರೋಲಿಂಗ್ ಸಿಸ್ಟಂ ಆಗಿ ಈ ಕೇಂದ್ರವನ್ನು ರೂಪಿಸಲಾಗುತ್ತಿದೆ.

ಪ್ರಮುಖ ಸಂಸ್ಥೆಗಳ ಸಹಭಾಗಿತ್ವ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ-ಆಡಳಿತ ವಿಭಾಗ, ರಾಷ್ಟ್ರೀಯ ದೂರ ಸಂವೇದಿ ಕೇಂದ್ರ-ದಕ್ಷಿಣ (ಆರ್‌ಆರ್ ಎಸ್‌ಸಿ -ಇಸ್ರೊ), ಎಲ್ಲ ಕೃಷಿ ವಿಶ್ವವಿದ್ಯಾಲಯಗಳು, ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಹಯೋಗದಲ್ಲಿ ಕೃಷಿ ಇಲಾಖೆ ಈ ಯೋಜನೆಯನ್ನು ಜಾರಿಗೊಳಿಸಲಿದೆ.

ಕಾರ್ಯನಿರ್ವಹಣೆ ಹೇಗೆ?

ಕೃಷಿ ಕ್ಷೇತ್ರದಲ್ಲಿ ಎದುರಾಗುವ ಪ್ರಮುಖ ಸವಾಲುಗಳನ್ನು ಆಧುನಿಕ ತಂತ್ರಜ್ಞಾನದ ಬಳಕೆ ಮೂಲಕ ಪರಿಹರಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ದೂರ ಸಂವೇದಿ ಕೇಂದ್ರದ ಹೈ ರೆಸಲ್ಯೂಷನ್ ಮ್ಯಾಪಿಂಗ್ ಮಾಹಿತಿಯೊಂದಿಗೆ ಸಮಸ್ಯಾತ್ಮಕ ಹಂತದಲ್ಲಿರುವ ಕೃಷಿ ಭೂನಕ್ಷೆಗಳನ್ನು ಸಿದ್ಧಪಡಿಸುವುದು, ಬೆಳೆಗಳಿಗೆ ಸಂಬಂಧಿಸಿದಂತೆ ರೈತರಿಗೆ ವಿಶೇಷಸಲಹೆಗಳನ್ನು ಸಿದ್ಧಪಡಿಸುವುದು. ಮಣ್ಣು ತೇವಾಂಶ ಮ್ಯಾಟ್ರಿಕ್, ಬೆಳೆ ಪ್ರದೇಶ ಅಂದಾಜು, ಇಳುವರಿ ಅಂದಾಜು ಮಾಡ್ಯೂಲ್‌ಗಳನ್ನು ಈ ಕೇಂದ್ರ ಸಿದ್ಧಪಡಿಸಲಿದೆ.

ಜತೆಗೆ, ಸ್ಥಳೀಯ ಬೆಳೆ ಹಂಚಿಕೆ ಮತ್ತು ಪ್ರದೇಶದ ಅಂದಾಜು ಸಿದ್ಧಪಡಿಸುವುದು, ಬೆಳೆ ಆರೋಗ್ಯ ಮೌಲ್ಯಮಾಪನ, ಮಣ್ಣಿನ ತೇವಾಂಶದ ಮೇಲೆ ನಿಗಾ ವಹಿಸುವ ಕೆಲಸವನ್ನು ಡಿಜಿಟಲ್ ಕೃಷಿ ಸೇವಾ ಕೇಂದ್ರ ಮಾಡಲಿದ್ದು, ರೈತರು ಮತ್ತು ಸಂಬಂಧಿತ ಅಧಿಕಾರಿಗಳು ತೀರ್ಮಾನ ಕೈಗೊಳ್ಳಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿಸಿದ ಸಲಹೆಗಳನ್ನು ನೀಡಲಿದೆ.

ಪ್ರಯೋಗಾಲಯಗಳಿಗೆ ಕಾಯಕಲ್ಪ

ಡಿಜಿಟಲ್ ಕೃಷಿ ಸೇವಾ ಕೇಂದ್ರ ಸ್ಥಾಪನೆ ಜತೆಗೆ, ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ 58 ಪ್ರಯೋಗಾಲಯಗಳನ್ನು ಒಟ್ಟು 6 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವ ಸಂಬಂಧವೂ ಸರಕಾರ ಮೇ 16ರಂದು ಆದೇಶ ಹೊರಡಿಸಿದೆ. ರೈತರಿಗೆ ಮಣ್ಣುಪರೀಕ್ಷೆಮತ್ತು ಅವರು ಬಳಸುವ ರಸಗೊಬ್ಬರ, ಬಿತ್ತನೆ ಬೀಜ, ಸಸ್ಯ ಸಂರಕ್ಷಣಾ ಔಷಧಿ, ಜೈವಿಕ ಗೊಬ್ಬರಗಳ ಗುಣಮಟ್ಟವನ್ನು ಪರೀಕ್ಷಿಸುವ ಎಲ್ಲ ಪ್ರಯೋಗಾಲಯಗಳನ್ನು ಆಧುನಿಕ ತಂತ್ರಜ್ಞಾನದೊಂದಿಗೆ ಬಲವರ್ಧನೆ ಮಾಡಲಾಗುತ್ತಿದೆ.